ಡಾ: ಹೆಚ್. ಸಿ. ಮಹದೇವಪ್ಪ (ಮಾನ್ಯ ಲೋಕೋಪಯೋಗಿ ಸಚಿವರು): ದಾವಣಗೆರೆ ಜಿಲ್ಲೆ, ಹರಿಹರ ತಾಲ್ಲೂಕಿನ ಕಕ್ಕರಗೊಳ್ಳ–ಚಿಕ್ಕಬಿದರಿ ಜಿಲ್ಲಾ ಮುಖ್ಯ ರಸ್ತೆಯು ಒಟ್ಟು 16.00 ಕಿ.ಮಿ. ಇದ್ದು, ಕಿ. ಮೀ. 11.40 ರಲ್ಲಿ ಹಿರೇಹಳ್ಳಕ್ಕೆ ಅಡ್ಡಲಾಗಿ ಪ್ರಸ್ತುತ Low Level Causeway ಇದ್ದು, ಪ್ರತಿ ವರ್ಷ ಮಳೆಗಾಲದ ಸಂದರ್ಭದಲ್ಲಿ ತುಂಗಭದ್ರ ನದಿಯ ಹಿನ್ನೀರು ಉಕ್ಕಿ ಹರಿಯುವುದರಿಂದ ರಸ್ತೆ ಸಂಪರ್ಕ ಕಡಿತಗೊಂಡು ಸಾರ್ವಜನಿಕರಿಗೆ ತೊಂದರೆಯಾಗುತ್ತಿರುವುದರಿಂದ, ಪ್ರಸ್ತುತ ಇರುವ ಎಲ್ಎಲ್ಸಿ ಬದಲಾಗಿ ಹೊಸ ಸೇತುವೆ ನಿರ್ಮಾಣಕ್ಕೆ ರೂ.600.00 ಲಕ್ಷಗಳ ಅನುದಾನ ಅವಶ್ಯವಿರುತ್ತದೆ. 2015–16ನೇ ಸಾಲಿನ ಆಯವ್ಯಯ ಭಾಷಣದಲ್ಲಿ ಸನ್ಮಾನ್ಯ ಮುಖ್ಯಮಂತ್ರಿಗಳು ರಾಜ್ಯದಲ್ಲಿ ಪ್ರಮುಖ ರಸ್ತೆಗಳನ್ನು ಜೋಡಿಸುವ ಸೇತುವೆಗಳನ್ನು ಅಭಿವೃದ್ಧಿ ಪಡಿಸಲು ರೂ 1000 ಕೋಟಿಗಳ ವೆಚ್ಚದಲ್ಲಿ 386 ಹೊಸ ಸೇತುವೆ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗುವುದೆಂದು ಘೋಷಿಸಿದ್ದು, ಅದರಂತೆ, ಕೆಆರ್ಡಿಸಿಎಲ್ ವತಿಯಿಂದ ಕೈಗೊಳ್ಳಲು ಉದ್ದೇಶಿಸಿರುವ ಹೊಸ ಸೇತುವೆ ಕಾಮಗಾರಿಯ ಪಟ್ಟಿಯಲ್ಲಿ ಸದರಿ ಸೇತುವೆ ಕಾಮಗಾರಿಯು ಸೇರಿದ್ದು, ಪರಿಶೀಲನೆಯ ಹಂತದಲ್ಲಿದೆ.

3. **ವಿಷಯ: ರಾಜ್ಯದ ಪೊಲೀಸ್ ಇಲಾಖೆಯಲ್ಲಿ ತರಬೇತಿ ಪಡೆದ ಪೊಲೀಸ್ ಪೇದೆಗಳನ್ನು ಆರ್ಡರ್ಲಿಗಳನ್ನಾಗಿ ಇಲಾಖೆಯ ಅಧಿಕಾರಿಗಳ ಕುಟುಂಬದವರ ಸೇವೆಗಾಗಿ ಬಳಸಿಕೊಳ್ಳುತ್ತಿರುವುದರಿಂದ ಆರ್ಡರ್ಲಿ ವ್ಯವಸ್ಥೆಯನ್ನು ರದ್ದುಪಡಿಸುವ ಬಗ್ಗೆ.**

ಅಧ್ಯಕ್ಷರು: ಮಾನ್ಯ ರಾಜೀವ್‌ರವರಿಗೆ ಉತ್ತರವನ್ನು ಕಳುಹಿಸಿಕೊಡಿ.

(ಗೊಂದಲ)

ಡಾ: ಜಿ. ಪರಮೇಶ್ವರ (ಮಾನ್ಯ ಗೃಹ ಸಚಿವರು): ಕರ್ನಾಟಕ ರಾಜ್ಯದ ಪೊಲೀಸ್ ಮಹಾ ನಿರ್ದೇಶಕರ ಮಟ್ಟದಿಂದ ಡಿವೈಎಸ್ಪಿ ಹಂತದ ಅಧಿಕಾರಿಗಳು ಪೊಲೀಸ್ ತರಬೇತಿ ಪಡೆದ ಪೇದೆಗಳನ್ನು ಆಡಲ್ರ್ಗಳನ್ನಾಗಿ,

ಅಧಿಕಾರಿಗಳ ವೈಯಕ್ತಿಕ ಮನೆ ಕೆಲಸಕ್ಕೆ ಮನೆ ಸದಸ್ಯರ ಹಾಗೂ ಮಕ್ಕಳ ಸೇವೆಗೆ ಪೊಲೀಸ್ ಪೇದೆಗಳನ್ನು ನಿಯೋಜಿಸಿಕೊಳ್ಳುತ್ತಿರುವುದಿಲ್ಲ.

ಪೊಲೀಸ್ ಮ್ಯಾನ್ಯುಯಲ್‌ನ ಕಂಡಿಕೆ ಸಂಖ್ಯೆ: 862 ಮತ್ತು 863ರ ಪ್ರಕಾರ ಆರ್ಡರ್ಲಿಗಳನ್ನು ಸರ್ಕಾರಿ ಕೆಲಸಕ್ಕೆ ಮಾತ್ರ ಬಳಸಿಕೊಳ್ಳಲಾಗುತ್ತಿದೆ.

ಅಧ್ಯಕ್ಷರು: ಶ್ರೀ ಜಿ. ಎಸ್. ಪಾಟೀಲ್ ಕೇಳಿ. ತಮಗೆ ಉತ್ತರ ಬಂದಿದೆಯೇ;

(ಗೊಂದಲ)

ಶ್ರೀ ಜಿ. ಎಸ್. ಪಾಟೀಲ್ : ಇಲ್ಲ.

(ಗೊಂದಲ)

ಅಧ್ಯಕ್ಷರು: ಮಾನ್ಯ ಪಾಟೀಲ್‌ರವರಿಗೆ ಉತ್ತರ ಕಳುಹಿಸಿಕೊಡಿ.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್: ಈ ಸರ್ಕಾರದಲ್ಲಿ ಉತ್ತರ ಇಲ್ಲ, ಏನೂ ಇಲ್ಲ. ಈ ಸರ್ಕಾರಕ್ಕೆ ಏನೂ ಜವಾಬ್ದಾರಿ ಇಲ್ಲ.

(ಗೊಂದಲ)

ಅಧ್ಯಕ್ಷರು: ಶ್ರೀ ವಿಜಯಾನಂದ ಎಸ್. ಕಾಶಪ್ಪನವರ್ ಕೇಳಿ.

(ಗೊಂದಲ)

4. **ವಿಷಯ: ಬಾಗಲಕೋಟೆ ಜಿಲ್ಲೆಯ ಇಲಕಲ್ಲ ನಗರ ಹಾಗೂ ಹುನಗುಂದ ಪಟ್ಟಣದ ಮೂಲಕ ಹಾಯ್ದು ಹೋಗುವ ರಾಷ್ಟ್ರೀಯ ಹೆದ್ದಾರಿ–50ರಲ್ಲಿ ಹೊಸಪೇಟೆಯಿಂದ ಇಲಕಲ ಹಾಗೂ ಇಲಕಲ್ಲದಿಂದ ವಿಜಯಪುರದವರೆಗೆ ಸರ್ವೀಸ್ ರಸ್ತೆ ಕಾಮಗಾರಿ ಪೂರ್ಣಗೊಳ್ಳದಿರುವುದರಿಂದ ರೈತರಿಗೆ ಹಾಗೂ ಸಾರ್ವಜನಿಕರಿಗೆ ತೊಂದರೆ ಉಂಟಾಗುತ್ತಿರುವ ಬಗ್ಗೆ.**

ಅಧ್ಯಕ್ಷರು: ಮಾನ್ಯ ಸದಸ್ಯರಿಗೆ ಉತ್ತರವನ್ನು ಕಳುಹಿಸಿಕೊಡಿ.